**<u>ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ. ಎಲ್ ಎ ವಕೀಲರಿಂದಃ-</u>**

1. ವಾದಿಯ ಕುಟುಂಬದ ಬಗ್ಗೆ ತಮಗೆ ಗೊತ್ತಾ ಎಂದರೆ ಗೊತ್ತು ಎನ್ನುತ್ತಾರೆ. ವಾದಿಗೆ ಎರಡು ಕಡೆ ಆಸ್ತಿ ಇದ್ದು ಒಟ್ಟು ಒಂದು ಮುಕ್ಕಾಲು ಎಕರೆ ಇರಬಹುದು ಎನ್ನುತ್ತಾರೆ. ಯಾವ ಸರ್ವೇ ನಂಬರಿನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಹೇಳುವಿರಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ವಾದಿಗೆ ವ್ಯವಸಾಯದ ಜಮೀನು ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ಪಕ್ಕ ನಿಮಗೆ ಸೇರಿದ ಆಸ್ತಿ ಇದೆಯಾ ಎಂದರೆ ಸಾಕ್ಷಿ ಎರಡು ಸರ್ವೇ ನಂಬರ್ ಬಿಟ್ಟು ನನ್ನ ಆಸ್ತಿ ಇದೆ ಎನ್ನುತ್ತಾರೆ. ತಿಮ್ಮಬೋವಿ ಯಾರು ಎಂದರೆ ಸಾಕ್ಷಿ ವಾದಿ ಮಂಜುನಾಥನ ತಂದೆ ಎನ್ನುತ್ತಾರೆ. ದಾವಾ ಆಸ್ತಿಗಳನ್ನು ವಾದಿಯ ತಂದೆ ತಿಮ್ಮಬೋವಿರವರು ದಿ 02.04.1964ರಲ್ಲಿ 7 ಗುಂಟೆ ಮತ್ತು 04.01.1964ರಲ್ಲಿ 17 ಗುಂಟೆಯನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

2. ಪ್ರತಿವಾದಿಯು ತಾನು ಖರೀದಿ ಮಾಡಿದ ನಂತರ ಸದರಿ ವಿಸ್ತೀರ್ಣದ ಆಸ್ತಿಗಳನ್ನು ಕ್ರಯ ಪತ್ರದಂತೆ ಖಾತೆ ಮಾಡಿಸಿಕೊಳ್ಳದೆ ಇದ್ದುದ್ದರಿಂದ ದಾವಾ ಆಸ್ತಿಗಳು ವಾದಿಯ ತಂದೆಯ ಪೌತಿ ಮೇರೆಗೆ ವಾದಿಯ ತಾಯಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. 1ನೇ ಪ್ರತಿವಾದಿಯು ವಾದಿಯ ತಾಯಿಯ ಹೆಸರಿಗೆ ಆಗಿದ್ದ ಪೌತಿ ಖಾತೆಯನ್ನು ಪ್ರಶ್ನಿಸಿ ರಾಮನಗರ ಎಸಿ ನ್ಯಾಯಾಲಯದಲ್ಲಿ ಆರ್ ಎ 60/2017-18 ಎಂದು ಅಪೀಲು ಮಾಡಿದ್ದರು ಎಂದರೆ ಸರಿ. ದಿ 09.06.2017ರಂದು ವಾದಿಯ ತಾಯಿಗೆ ದಾವಾ ಆಸ್ತಿಯ ಖಾತೆ ಆಗಿದ್ದನ್ನು ರದ್ದು ಪಡಿಸಿ ಎಸಿ ರಾಮನಗರ ರವರು ಆದೇಶಿಸಿದ್ದಾರೆ ಎಂದರೆ ಸಾಕ್ಷಿ ಗಲಾಟೆ ಮಾಡಿ ರದ್ದು ಮಾಡಿಸಿದ್ದಾರೆ ಎನ್ನುತಾರೆ. ತದನಂತರ ತಹಶೀಲ್ದಾರ್

ಚನ್ನಪಟ್ಟಣರವರ ಪ್ರಾಧಿಕಾರದಲ್ಲಿ ಕೇಸ್ ದಾಖಲು ಆಗಿತ್ತು ಎಂದರೆ ಸರಿ. ವಾದಿಯ ತಾಯಿಯ ಹೆಸರಿಗೆ ಆಗಿದ್ದ ಖಾತೆಯನ್ನು ದಿ 07.03.2018ರಂದು ರದ್ದು ಪಡಿಸಿ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ದಾಖಲು ಮಾಡುವಂತೆ ಆದೇಶಿಸಿದ್ದರು ಎಂದರೆ ಸರಿ.

3. ದಿನಾಂಕ 05.07.2018ರಂದು ವಾದಿಯ ಕುಟುಂಬದವರು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದು ಸದರಿ ವಿಭಾಗ ಪತ್ರ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಗೊತ್ತು ಎನ್ನುತ್ತಾರೆ. ವಿಭಾಗ ಪತ್ರ ಮಾಡಿಕೊಂಡ ಸಮಯಕ್ಕೆ ತಹಶೀಲ್ದಾರ್ ಚನ್ನಪಟ್ಟಣ ಮತ್ತು ಉಪವಿಭಾಗಾಧಿಕಾರಿರವರು ವಾದಿಯ ತಾಯಿ ಹೆಸರಿಗೆ ಇದ್ದ ಖಾತೆಯನ್ನು ರದ್ದು ಪಡಿಸಿ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. 1964 ರಿಂದ 1ನೇ ಪ್ರತಿವಾದಿ ಮತ್ತು ಅವರ ಕುಟುಂಬಸ್ಥರೆ ದಾವಾ ಆಸ್ತಿಯ ಸ್ವಾಧೀನ ಮತ್ತು ಅನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ